# Designation of Indian hive bee (*Apis Cerana indica*) as state insect of Karnataka

## ಅಡವಿ ತುಡವಿ ಜೇನು ಹುಳು ಸೀತಾಳೆ ಆರ್ಕಿಡ್‌ಗೆ ರಾಜ್ಯಪಟ್ಟ?



ಸಿಎಂ ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಭೇಟಿಯಾಗಿದ್ದ ನಿಯೋಗ.

**ಬೆಂಗಳೂರು:** ಅಡವಿ ತುಡವಿ ಜೇನು ಹುಳುವಿಗೆ ರಾಜ್ಯ ಕೀಟ ಹಾಗೂ ಸೀತಾಳೆ ಆರ್ಕಿಡ್‌ಗೆ ರಾಜ್ಯ ಸಸ್ಯ ಸ್ಥಾನಮಾನ ನೀಡಬೇಕೆಂಬ ಶಿಫಾರಸು ಜಾರಿಗೆ ತರಲು ಅರಣ್ಯ ಇಲಾಖೆ ಮುಖ್ಯಸ್ಥರು ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಸೂಚಿಸಿದ್ದಾರೆ.

ರಾಜ್ಯ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ ನೇತೃತ್ವದ ನಿಯೋಗ ಮಂಗಳವಾರ ಯಡಿಯೂರಪ್ಪರನ್ನು ಭೇಟಿ ಆಗಿ, ವನ್ಯಜೀವಿ ಕಾಯ್ದೆ ಅನ್ವಯ ಅಡವಿ ತುಡವಿ ಜೇನು ಹುಳು ಹಾಗೂ ಸೀತಾಳೆ ಆರ್ಕಿಡ್‌ಗೆ ರಾಜ್ಯಪಟ್ಟ ನೀಡಬೇಕಾದ ಔಚಿತ್ಯ ವಿವರಿಸಿತು.

**ಪರಿಸರ, ಕೃಷಿಗೆ ಪೂರಕ:** ಸಂಶೋಧಕರು ಗುರುತಿಸಿದ ಪ್ರಕಾರ ಅಡವಿ ತುಡವಿ ಜೇನು ಹುಳು 'ಪರಿಸರ ಆರೋಗ್ಯ ಸೂಚಕ'. ಕಾಡಿನ ಜೇನು ಸಂಕುಲ ಉಳಿಸಿ, ಪರಾಗಸ್ಪರ್ಶ ಹೆಚ್ಚಿಸಬೇಕು. ಇದರಿಂದ ಅರಣ್ಯ ಅಭಿವೃದ್ಧಿಯಾಗಿ, ರೈತರು ಜೇನು ಸಾಕಣೆ ಮಾಡಿ ಆದಾಯ ಹೆಚ್ಚಿಸಿಕೊಳ್ಳಲು ಸಾಧ್ಯವಿದೆ. ಕೃಷಿ ಹಾಗೂ ಕಾಡು ಬೆಳೆ ಬೀಜೋತ್ಪಾದನೆ ಹೆಚ್ಚಿಸಲು ಜೇನು ಸಂತತಿ ಕೊಡುಗೆ ಅಪಾರವಾದದ್ದು ಎಂದು ಅನಂತ ಹೆಗಡೆ ತಿಳಿಸಿದರು. ರಾಜ್ಯ ಆರ್ಕಿಡ್ ಸೊಸೈಟಿ ಅಧ್ಯಕ್ಷ ಡಾ.ಶಶಿಧರ, ಕೇಂದ್ರ ಸರ್ಕಾರದ ಕೃಷಿ ಸಂಶೋಧನಾ ಮಂಡಳಿಯ ಕೀಟ ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ.ಭಕ್ತವತ್ಸಲಂ, ಮಂಡಳಿ ಸದಸ್ಯ ಕಾರ್ಯದರ್ಶಿ ಪುನೀತ್ ಪಾಠಕ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾ ಇಲಾಖೆ ಪ್ರಧಾನ ಕಾರ್ಯದರ್ಶಿ ವಿಜಯಕುಮಾರ್ ಗೋಗಿ, ಪ್ರೀತಂ, ಕಾರ್ತಿಕ್ ಇತರರಿದ್ದರು.

Bengaluru Edition
Sep 16, 2020 Page No. 11
Powered by : eReleGo.com

**Kannada Vijayavani Newspaper**
**Date: 16-09-2020**